KAYG030020602022

# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ

**:ಉಪಸ್ಥಿತರು:**

**ಶ್ರೀ ರಾಹುಲ ಚಾಂಭಾರ, ಬಿ.ಎ. ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ**
**ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಯಾದಗಿರಿ.**

## ದಿನಾಂಕ 10 ನೇ ಜನೇವರಿ 2025

## ಕ್ರಿಮಿನಲ್ ಸಂಖ್ಯೆ: 1120/2022

**ಅರ್ಜಿದಾರರು/ ಆರೋಪಿತ** : ಭದ್ರಿನಾಥ ತಂದೆ ಜ್ಞಾನೇಶ್ವರ ಚಾಟ್ಲಾ

**(ಅರ್ಜಿದಾರರ ಪರ ವಕೀಲರು ಶ್ರೀ ಎ.ಎಸ್.ಪಿ. ವಕೀಲರು)**

**ವಿರುದ್ಧ**

**ಎದುರುದಾರರು** : ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸುವವರು
ಯಾದಗಿರಿ (ಗ್ರಾ) ಪೋಲಿಸ್ ಠಾಣೆ ಯಾದಗಿರಿ.

**(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)**

## ದಂಡ ಪ್ರಕ್ರಿಯೆ ಸಂಹಿತೆ ಕಲಂ 239 ರ ಮೇಲಿನ ಆದೇಶ:-

ಆರೋಪಿತ /ಅರ್ಜಿದಾರರ ಪರ ಮಧ್ಯಂತರ ಅರ್ಜಿಯನ್ನು ದಂಡ ಪ್ರಕ್ರಿಯೆ ಸಂಹಿತೆಯ ಕಲಂ 239 ರಡಿಯಲ್ಲಿ ಸಲ್ಲಿಸಿ, ಸದರಿ ಅರ್ಜಿದಾರನನ್ನು/ಆರೋಪಿಯನ್ನು

ಪ್ರಕರಣದ ಸದರಿ ಆರೋಪದಿಂದ ಬಿಡುಗಡೆ/ವಿಮೋಚನೆ ಮಾಡಬೇಕೆಂದು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2. ಅರ್ಜಿಯ ಸಂಕ್ಷೀಪ್ತ ಸಾರಾಂಶಃ** ಆರೋಪಿತನು ತಮ್ಮ ಅರ್ಜಿಯಲ್ಲಿ ಹೇಳುವುದೇನೆಂದರೆ, ಸದರಿ ದೂರಿನ ಸಾರಾಂಶದ ಪ್ರಕಾರ ಆರೋಪಿತನು ದೂರುದಾರನ ಕಡೆಯಿಂದ 283 ಕಣಿಕಿ ಚೀಲಗಳನ್ನು ಖರೀದಿ ಮಾಡಿದ್ದು ಇರುತ್ತದೆ. ಸದರಿ ವಿವಾದಾವು ಸಿವಿಲ್ ಸ್ವರೂಪಾದ ಇರುತ್ತದೆ. ಸದರಿ ದೂರುದಾರನು ಆರೋಪಿತನನ್ನ ಕ್ರಿಮಿನಲ್ ಮೋಕ್ಕದಮೆಯಲ್ಲಿ ಸೇರಿಬೇಕೆಂಬ ಉದ್ದೇಶದಿಂದ ಮತ್ತು ಹಣ ವಸೂಲಾತಿ ಮಾಡಿಬೇಕೆಂಬ ಉದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಿರುತ್ತಾರೆ. ಪ್ರಥಮ ವರ್ತಮಾನ ವರದಿಯಲ್ಲಿ ಮಾಡಿದ ಆರೋಪಗಳು ಯಾವುದೇ ಅಪಾರಾಧವನ್ನು ತೋರಿಸಿರುವುದಿಲ್ಲ. ಸದರಿ ಕೃತ್ಯಕ್ಕೆ ಸಂಬಂಧಪಟ್ಟಂತೆ ಸಾಕ್ಷಿಗಳು ಕೂಡ ಆರೋಪಿತನು ಅಪಾರಾಧ ಮಾಡಿರುತ್ತನೆಂದು ಬಾಹಿರಂಗ ಪಡಿಸಿರುವುದಿಲ್ಲ.

3. ಆರೋಪಿತನು ಮುಂದುವರೆದು ಹೇಳುವುದೇನೆಂದರೆ, ಸದರಿ ಹಣವನ್ನು ಮರಳಿ ಪಡೆಯಲು ದೂರುದಾರನು ಯಾವುದೇ ಸಿವಿಲ್ ವ್ಯಾಜ್ಯವನ್ನು ಹೂಡಿರುವುದಿಲ್ಲ. ಆದರೆ ದೂರುದಾರನು ಕ್ರಿಮಿನಲ್ ನ್ಯಾಯಾಲಯಕ್ಕೆ ಬಂದಿರುತ್ತಾನೆ. ಆದ್ದರಿಂದ

ದೂರುದಾರನು ಸಿವಿಲ್ ವ್ಯಾಜ್ಯವನ್ನು ಕ್ರಿಮೀನಲ್‌ವ್ಯಾಜ್ಯ ಎಂದು ಪರಿಗಣಿಸಿ ಆರೋಪಿತನ ಮೇಲೆ ಒತ್ತಡ ತರಲು ಪ್ರಯತ್ನ ಮಾಡುತ್ತಿದ್ದಾನೆ ಎಂದು ಹೇಳುತ್ತಾರೆ. ಮುಂದುರೆದು ಭಾ.ದ. ಸಂ. ಕಲಂ 406,420,468 ಅಪಾರಾಧಗಳ ಯಾವುದೇ ಲಕ್ಷಣಗಳು ಆರೋಪಿತನ ವಿರುದ್ದ ಸೇಳೆಯುವುದಿಲ್ಲ. ಆದ್ದರಿಂದ ಆರೋಪಿತನನ್ನು ಈ ಪ್ರಕರಣದಿಂದ ವಿಮೋಚನೆ ಮಾಡುವ ಅವಶ್ಯಕತೆ ಇರುತ್ತದೆ.

4. ಸದರಿ ಅರ್ಜಿಗೆ ಅಭಿಯೋಜನೆಯ ಪಕ್ಷದವರು ತಮ್ಮ ತಕರಾರನ್ನು ಸಲ್ಲಿಸಿ, ಆರೋಪಿತನು ಭಾ.ದಂ. ಪ್ರ ಸಂಹಿತೆ ಕಲಂ 239 ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿ ಕಾನೂನಿನಲ್ಲಿ ಊರ್ಜಿತವಾಗಿರುವುದಿಲ್ಲ. ಆರೋಪಿತನು ಅಪಾರಾಧ ಮಾಡಿರುತ್ತಾನೆಂದು ತನಿಖಾಧಿಕಾರಿಗಳು ತಮ್ಮ ತನಿಖೆಯಲ್ಲಿ ಕಾನೂನು ಸಮ್ಮತ ಸಾಕ್ಷ್ಯದಾರಗಳನ್ನು ಸಂಗ್ರಹಿಸಿರುತ್ತಾರೆ. ಚಾಸಾಃ4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡು ಆರೋಪಿತನು ಅಪಾರಾಧ ಮಾಡಿದರ ಬಗ್ಗೆ ಸ್ಪಷ್ಟವಾಗಿ ಗೋಚರವಾಗಿರುತ್ತಾದೆ. ಮುಂದುವರೆದು, ದೂರುದಾನು ಆರೋಪಿತನಿಗೆ 228, 280 ಕಿಂಟಲ್ ಕಣಿಕೆಯನ್ನು ಕಳುಹಿಸಿರುವುದಕ್ಕೆ ತನಿಖಾಧಿಕಾರಿಗಳು ಸೂಕ್ತ ದಾಖಲಾತಿಗಳನ್ನು ಸಂಗ್ರಹಿಸಿರುತ್ತಾರೆ. ಜಪ್ತಿ ಪಂಚನಾಮೆಯಲ್ಲಿ 1 ರಿಂದ 10 ನೇ ದಾಖಲಾತಿಗಳು ಆರೋಪಿತನು ದೂರುದಾನಿಗೆ ಮೋಸ ಮಾಡುವ ಉದ್ದೇಶದಿಂದ ಆರ್.ಟಿ.ಜಿ.ಎಸ್ ಮಾಡಿರುವುದು ಕಂಡು ಬರುತ್ತದೆ.

**5.** ತನಿಖಾಧಿಕರಿಗಳು ಸಂಗ್ರಹಿಸಿರುವ ಸಾಕ್ಷ್ಯಾಧಾರಗಳಿಂದ ಆರೋಪಿತರು ಭಾ.ದಂ.ಸಂ ಕಲಂ: 406, 420, 468 ಐಪಿಸಿ ಅಡಿಯಲ್ಲಿ ಅಪರಾಧ ಮಾಡಿವುದುವು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಆರೋಪಿತನು ಸಲ್ಲಿಸಿರುವ ಭಾ.ದಂ.ಸಂ ಪ್ರಕ್ರಿಯ ಸಂಹಿತೆಯ ಕಲಂ:239 ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿ ಊರ್ಜಿತವಾಗಿರುವುದಿಲ್ಲ. ಆದ್ದರಿಂದ ಗೌರವಾನ್ವಿತರು ಆರೋಪಿತನು ಸಲ್ಲಿಸಿರುವ ಅರ್ಜಿಯನ್ನು ನ್ಯಾಯದ ಹಿತದೃಷ್ಟಿಯಿಂದ ತಿರಸ್ಕರಿಸಬೇಕಾಗಿ ಪ್ರಾರ್ಥನೆ ಮಾಡಿರುತ್ತಾರೆ.

**6.** ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಿದ ನಂತರ, ಈ ಅರ್ಜಿಗಳ ನಿರ್ಧರಣೆಗಾಗಿ ಈ ಕೆಳಕಂಡ ಅಂಶಗಳು ಉದ್ಭವವಾಗುತ್ತವೆ.

1. ಆರೋಪಿ ಈ ಮೊಕದ್ದಮೆಯಿಂದ ವಿಮೋಚನೆ/ಬಿಡುಗಡೆ ಮಾಡಲು ಸಾಕಷ್ಟು ಆಧಾರಗಳು ಇವೆಯೇ?
2. ಯಾವ ಆದೇಶ?

**7 .** ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಮುಂದಿನಂತೆ ಉತ್ತರಿಸಿದ್ದೇನೆ

ಅಂಶ ಸಂಖ್ಯೆ 1ಃ **ಭಾಗಶಃ ಸಕಾರಾತ್ಮಕವಾಗಿ**

ಅಂಶ ಸಂಖ್ಯೆ 2ಃ **ಅಂತಿಮ ಆದೇಶದಂತೆ,**

## ಃ ಕಾರಣಗಳು ಃ

8. **ಅಂಶ ಸಂಖ್ಯೆ 1 ಃ** ಅರ್ಜಿದಾರರ/ ಆರೋಪಿತನ ಸಂಕ್ಷೇಪ್ತ ಸಾರಾಂಶ ದೂರುದಾರನು ಆರೋಪಿತನ ಫೋನ್ ಕರೆಯ ಮೇರೆಗೆ ದಿನಾಂಕ 19-08-2021 ರಂದು ಚಾಸಾಃ6 ರವರ ವಾಹನದ ಮೂಲಕ 283 ಕಿಂಟಲ್ ಕಣಿಕೆಯನ್ನು ಕಳಿಯಿಸಿರುತ್ತಾರೆ. ಸದರಿ ಆರೋಪಿತನು ದೂರುದಾರನಿಗೆ 4 ಲಕ್ಷ ರೂಪಾಯಿ ಯುನಿಯ್ಯನ್ ಬ್ಯಾಂಕ್ ಚೆಕ್ ಮುಂಖಾತರ ಕಳುಹಿಸುತ್ತಿದ್ದೇನೆ ಅಂತಾ ಹೇಳಿ ಮೋಸ ಮಾಡಿರುತ್ತಾನೆ. ದಿನಾಂಕ 24-08-2020 ರಂದು ಆರೋಪಿತನು ದೂರುದಾರನಿಗೆ ಎಸ್.ಬಿ.ಐ ಬ್ಯಾಂಕ್ ಸ್ಲಿಪ್ ವಾಟಸಪ್ ಮಾಡಿ 3 ಲಕ್ಷ ರೂಪಾಯಿ ಚಕ್ ಮೂಲಕ ಆರ್.ಟಿ.ಜಿ.ಎಸ್ ಮೂಲಕ ಹಣ ಕಳುಹಿಸಿರುತ್ತೆನೇಂದು ವಾಟಸ್ಪ ಮಾಡಿರುತ್ತಾನೆ. ಆದರೆ ಯಾವುದೇ ಹಣ  ದೂರುದಾರನ ಖಾತೆಗೆ ಜಮ ಆಗಿರುವುದಿಲ್ಲ. ನಂತರ ದಿನಾಂಕ 25-08-2021 ರಂದು ಆರೋಪಿತನು ತನ್ನ ಬ್ಯಾಂಕ್ ಮೂಲಕ ದೂರುದಾನಿಗೆ 70 ಸಾವಿರ ರೂಪಾಯಿ ಕಳುಹಿಸಿ ಊಳಿದ ಹಣ 2 ಮತ್ತು 3 ದಿನಗಳಲ್ಲಿ ಕಳುಹಿಸಿಕೊಡುತ್ತೇನೆಂದು ಹೇಳಿರುತ್ತಾನೆ. ಆದರೆ ಯಾವುದೇ ಹಣ ಕಳುವುಸಿರುವುದಿಲ್ಲ. ತದನಂತರ ಆರೋಪಿತನು ಚಾಸಾಃ7 ರವರ ಕೈಯಲ್ಲಿ 3,70,000/- ಚೆಕ್ ನೀಡಿ ದಿನಾಂಕ 09-09-2021 ರಂದು ಚಕ್ ಪಾಸ್ ಮಾಡಿಕೊಳ್ಳರಿ ಎಂದು ಹೇಳಿರುತ್ತಾನೆ. ಆದರೆ ಬ್ಯಾಂಕ್ ಮ್ಯಾನೇಜರ್ ಹೆಸರು ತಪ್ಪು ಇರುತ್ತದೆ ಎಂದು ಹೇಳಿರುತ್ತಾರೆ. ಆಗ ಸದರಿ ವಿಚಾರ ಕುರಿತು ಕೇಳಿದಾಗ ಆರೋಪಿತನು ಸಮರ್ಪಕವಾಗಿ ಉತ್ತರವನ್ನು ನೀಡಿರುವುದಿಲ್ಲ.

ಆದ್ದರಿಂದ ಪ್ರಕರಣದ ತನಿಖೆಯಿಂದ ಆರೋಪಿತನ ವಿರುದ್ಧ ದೋಷರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ. ಈಗಾಗಲೇ ಮೇಲೆ ಆರೋಪಿತನು ಈ ಪ್ರಕರಣದಿಂದ ವಿಮೋಚನೆ ಮಾಡಲು ಆಧಾರಗಳು ಮತ್ತು ಅಭಿಯೋಜನೆದರು ಸಂಕ್ಷೀಪ್ತವಾಗಿ ತಮ್ಮ ಆಕ್ಷೇಪಣೆಯನ್ನು ಚರ್ಚಿಸಲಾಗಿದೆ.

9. ಈ ಸಂದರ್ಬಧಲ್ಲಿ ಈ ನ್ಯಾಯಾಲಯವು **ದಂಡ ಪ್ರಕ್ರಿಯಾ ಸಂಹಿತೆ ಕಲಂ 239 ಚರ್ಚಿಸಲು ಇಚ್ಚಿಸುತ್ತದೆ. ಕಲಂ 239 ಆರೋಪಿಯನ್ನು ಯಾವಾಗ ಬಿಡುಗಡೆ ಮಾಡತಕ್ಕುದು ಎಂದು ಹೇಳುತ್ತದೆ.** ಪೊಲೀಸ್ ವರದಿಯನ್ನು ಮತ್ತು 173 ನೇ ಪ್ರಕರಣದ ಮೇರೆಗೆ ಅದರೊಂದಿಗೆ ಕಳಿಸಲಾದ ದಸ್ತಾವೇಜುಗಳನ್ನು ಪರ್ಯಾಲೋಚಿಸಿದ ಮೇಲೆ ಮತ್ತು ಆರೋಪಿಯ ಬಗ್ಗೆ ದಂಡಾಧಿಕಾರಿಯು ಅವಶ್ಯಕವೆಂದು ಅಲೋಚಿಸುವಂತಹ ವಿಚಾರಣೆಯೇನಾದರೂ ಇದ್ದರೆ, ಅದನ್ನು ಮಾಡಿದ ಮೇಲೆ ಮತ್ತು ಅಭಿಯೋಜಕನಿಗೆ ಹಾಗೂ ಆರೋಪಿಗೆ ಅಹವಾಲು ಹೇಳಿಕೊಳ್ಳುವ ಅವಕಾಶ ಕೊಟ್ಟ ತರುವಾಯ , ಆಪಾದಿತ ವಿರುದ್ಧವಾಗಿರುವ ಆರೋಪವು ನಿರಾಧಾರವೆಂದು ದಂಡಾಧಿಕಾರಿಯು ಪರ್ಯಾಲೋಚಿಸಿದರೆ ಅವನು ಆರೋಪಿಯನ್ನು ಬಿಡುಗಡೆ ಮಾಡತಕ್ಕದು ಮತ್ತು ಹಾಗೇ ಮಾಡುವುದಕ್ಕೆ ಕಾರಣಗಳನ್ನು ಅಭಿಲೇಖಿಸತಕ್ಕುದು .

10. **ಬಿಡುಗಡೆಗೆ ಅಥವಾ ವಿಮೋಚನೆಗೆ ಅವಶ್ಯಕವಾದ ಅಂಶಗಳೆಂದರೆಃ-**

1. ದಂಡ ಪ್ರಕ್ರಿಯಾ ಸಂಹಿತೆಯ ಕಲಂ 173 ರಡಿಯಲ್ಲಿ ಪೊಲೀಸರು ಲಗತ್ತಿಸಿರುವ ಅಂತಿಮ ವರದಿಯನ್ನು ಮತ್ತು ಅದರೊಂದಿಗೆ ಕಳುಹಿಸಲಾಗುವ ದಾಖಲೆಗಳನ್ನು ನ್ಯಾಯಾಲಯವು ಪರಿಗಣಿಸಬೇಕಾಗುತ್ತದೆ.

2. ಮಾನ್ಯ ನ್ಯಾಯಾಲಯವು ಸೂಕ್ತ ಎಂದು ಭಾವಿಸಿದರೆ ಆರೋಪಿತರನ್ನು ಪರಿಶೀಲಿಸಬೇಕಾಗುತ್ತದೆ.

3. ಅನಂತರ ಅಭಿಯೋಜನೆಯ ಹಾಗೂ ಆರೋಪಿತರ ಪರ ವಾದವನ್ನು ಆಲಿಸಬೇಕಾಗುತ್ತದೆ.

4. ಆರೋಪಿತರ ವಿರುದ್ದ ಯಾವುದೇ ಸಾಕ್ಷ್ಯಧಾರಗಳು ಆಧಾರ ರಹಿತವಾಗಿರುವುದು ಎಂದು ಹಾಗೂ ಮೇಲ್ನೋಟಕ್ಕೆ (prima-facie) ಕಂಡು ಕೊಳ್ಳಬೇಕಾಗಿರುತ್ತದೆ.

**11.** ಫಿರ್ಯಾದಿದಾರರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲಾಗಿ, ಯಾದಗಿರಿ (ಗ್ರಾ) ಪೊಲೀಸರು ಸದರಿ ಪ್ರಕರಣವನ್ನು ತನಿಖೆ ನಡೆಸಿ, ನ್ಯಾಯಾಲಯಕ್ಕೆ ದಾಖಲೆಗಳೊಂದಿಗೆ ಆರೋಪಿ ವಿರುದ್ಧ ದೋಷಾರೋಪಣಾಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ನ್ಯಾಯಾಲಯವು ದಾಖಲೆಗಳ ಸಂಖ್ಯೆಃ 1 ರಿಂದ 34 ಎಂದು ಗುರುತಿಗಾಗಿ ಎಂದು ನೀಡಲಾಗಿರುತ್ತದೆ.

**ದಾಖಲೆ ಸಂಖ್ಯೆಃ 1** ಅಂತಿಮ ವರದಿಯಾಗಿದ್ದು, ಸದರಿ ಅಂತಿಮ ವರದಿಯಲ್ಲಿ ಆರೋಪಿತನ ವಿರುದ್ಧ ಮೇಲ್ನೋಟಕ್ಕೆ ಆರೋಪ ಸಾಬೀತು ಆಗಿದೆ ಎಂದು, ಸದರಿ ಆರೋಪಿತನ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುವುದು ಕಂಡು ಬರುತ್ತದೆ.

**ದಾಖಲೆ ಸಂಖ್ಯೆಃ 2** ಃ ಇದು ಪ್ರಥಮ ವರ್ತಮಾನ ವರದಿಯಾಗಿದ್ದು ಅದರಲ್ಲಿ ಆರೋಪಿ ನಂ.2 ರವರ ವಿರುದ್ಧ ಪ್ರಕರಣ ದಾಖಲಿಸಿದ್ದು ಕಂಡು ಬರುತ್ತದೆ.

**ದಾಖಲೆ ಸಂಖ್ಯೆಃ 3** ತಕ್ಷೀರು ಸ್ಥಳದ ಮಹಜರು ಆಗಿದ್ದು, ದಿ.31-10-2021 ರಂದು ಯಾದಗಿರಿಯಲ್ಲಿ ಮಹಜರು ಮಾಡಿ ಸಾಕ್ಷಿಗಳ ಸಹಿ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**ದಾಖಲೆ ಸಂಖ್ಯೆಃ 4** ದೂರುದಾನ ಹೇಳಿಕೆ.

**ದಾಖಲೆ ಸಂಖ್ಯೆಃ 5 ರಿಂದ 9** ದಂಡ ಪ್ರಕ್ರಿಯಾ ಸಂಹಿತೆ ಕಲಂ 161 ರಡಿಯಲ್ಲಿ ಪೊಲೀಸರು ಸಾಕ್ಷಿದಾರರ ಹೇಳಿಕೆಯನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಯಾಗಿರುತ್ತದೆ.

**ದಾಖಲೆ ಸಂಖ್ಯೆಃ 10** ಆರೋಪಿತನ ಸ್ವ ಖುಷಿ ಹೇಳಿಕೆ.

**ದಾಖಲೆ ಸಂಖ್ಯೆಃ 11 ರಿಂದ 13 ಃ** ಬ್ಯಾಂಕ್ ಸ್ಟೇಟಮೆಂಟ್.

**<u>ದಾಖಲೆ ಸಂಖ್ಯೆ: 14</u>** ರಿಂದ 17ಃ ಇತು ದಾಖಲಾತಿಗಳು.

12. ಪ್ರಸ್ತುತ ಪ್ರಕರಣದಲ್ಲಿ ಯಾದಗಿರಿ (ಗ್ರಾ) ಪೊಲೀಸರು ಆರೋಪಿತನ ವಿರುದ್ಧ ತನಿಖೆ ಪೂರೈಸಿ ಅಂತಿಮ ವರದಿಯ ಜೊತೆ ಈ ಮೇಲ್ಕಂಡ ದಾಖಲೆಗಳನ್ನು ಸಲ್ಲಿಸಿದ್ದು, ಸದರಿ ದಾಖಲೆಗಳಿಗೆ ನ್ಯಾಯಾಲಯವು ಸದರಿ ಅರ್ಜಿಗಳ ವಿಲೇವಾರಿಗಾಗಿ ದಾಖಲೆ ಸಂಖ್ಯೆಗಳನ್ನು ನೀಡಿದ್ದು, ಅವುಗಳನ್ನು ಹಾಗೂ ಅರ್ಜಿಯ ಅಂಶಗಳನ್ನು ಮತ್ತು ಅಭಿಯೋಜನೆಯವರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಆರೋಪಿತನು ದೂರುದಾರನಿಗೆ ಮೋಸ ಮಾಡಿರುತ್ತಾನೆಂದು ಎಂಬುದು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಸದರಿ ಪ್ರಕರಣದಲ್ಲಿ ಆರೋಪಿಸಿರುವಂತೆ ಭಾರತೀಯ ದಂಡ ಸಂಹಿತೆ ಕಲಂ.406, 420, 468 ರಡಿಯಲ್ಲಿ ಅರ್ಜಿದಾರರು/ಆರೋಪಿತನು ನಿಜವಾಗಿಯೂ ಅಪರಾಧ ಮಾಡಿರುತ್ತಾರೆ ಎಂಬುದನ್ನು ಮೇಲ್ನೋಟಕ್ಕೆ ಕಂಡು ಬರುತ್ತದೆಯೇ ಎಂಬ ಅಂಶವನ್ನು ಪರಿಶೀಲಿಸಬೇಕಾಗಿರುತ್ತದೆ.

13. ಅಭಿಯೋಜನೆಯವರ ಪ್ರಕಾರ ಪ್ರಕರಣವೇನೆಂದರೆ, ಅರ್ಜಿದಾರರ/ ಆರೋಪಿತನು ಸಂಕ್ಷಿಪ್ತ ಸಾರಾಂಶ ಈಗಾಗಲೇ ಚರ್ಚಿಸಿದಂತೆ ಸದರಿ ಆರೋಪಿತನು ದೂರುದಾರನಿಗೆ ಮೋಸ ಮಾಡುವ ಉದ್ದೇಶದಿಂದ ಚೆಕ್ ನೀಡಿರುತ್ತಾನೆ. ಸದರಿ ದಾಖಲಾತಿ ಸಂಖ್ಯೆ 11 ರಿಂದ 13 ಇವು ಪರಿಶೀಲಿಸಿ ನೋಡಿದಾಗ ಹಣವನ್ನು ಸಂದಾಯ ಮಾಡಿದ ಹಾಗೇ ದೂರುದಾರನಿಗೆ ಫೊಟೋ ಕಳುಹಿಸಿರುವುದು ಕಂಡು ಬರುತ್ತದೆ. ಅದರೆ ಯಾವುದೇ ರೀತಿಯ

ಹಣ ದೂರುದಾರನಿಗೆ ಜಮಾ ಆಗಿರುವುದಿಲ್ಲ ಎಂದು ಬ್ಯಾಂಕ ಸ್ಟೇಟಮೆಂಟ ತನಿಖಾಧಿಕಾರಿ ಹಾಜರು ಪಡಿಸಿರುತ್ತಾರೆ.

**14.** ಸದರಿ ಆರೋಪಿತನು ದಿನಾಂಕ 25-08-2021 ರಂದು 70 ಸಾವಿರ ರೂಪಾಯಿಗಳನ್ನು ನೀಡಿರುವುದು ಮತ್ತು ಉಳಿದ ಹಣವನ್ನು 2 ಮತ್ತು 3 ದಿನಗಳಲ್ಲಿ ಕೊಡುವುದಾಗಿ ಹೇಳಿದರೂ ಕೂಡ ನೀಡದೆ ಇದ್ದಾಗ ಚಾಸಾಃ7 ರವರ ಕಡೆ ದಿನಾಂಕ 09-09-2021 ರ ಚೆಕ್ ನೀಡಿದ್ದು ಅದು ಕೂಡ ತಪ್ಪು ಹೆಸರು ನಮೂದು ಮಾಡಿ ನೀಡಿದ್ದು ಮೇಲ್ನೋಟ್ಟಕ್ಕೆ ಕಂಡು ಬರುತ್ತದೆ. ಸದರಿ ಆರೋಪಿನ ಕೃತ್ಯವನ್ನು ನೋಡಿದಾಗ ದೂರುದಾರನಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಚೆಕ್ ನೀಡಿದ್ದು ಇರುತ್ತದೆ ಎಂದು ತಮ್ಮ ವರದಿಯಲ್ಲಿ ತನಿಖಾಧಿಕಾರಿ ಹೇಳಿರುತ್ತಾರೆ.

**15.** ಈ ಸಂದರ್ಭದಲ್ಲಿ ಈ ನ್ಯಾಯಾಲಯವು ಭಾರತಿಯ ದಂಡ ಸಂಹಿತೆ ಕಲಂ 406, 420, 468 ಚರ್ಚಿಸಲು ಇಚ್ಛಿಸುತ್ತದೆ.

> **ಕಲಂ 405 ಅಪಾರಾಧಿಕ ನಂಬಿಕೆ ದ್ರೋಹಃ** ಯಾವ ವ್ಯಕ್ತಿಯೇ ಆಗಲಿ, ಆತನಿಗೆ ಯಾವುದೇ ರೀತಿಯಲ್ಲಿ ಸ್ವತ್ತನ್ನು ಅಥವಾ ಸ್ವತ್ತಿನ ಮೇಲೆ ಅಧಿಕಾರವನ್ನು ನ್ಯಾಸವಾಗಿ ವಹಿಸಿ ಕೊಡಲಾಗಿದ್ದು, ಅಂತಹ ಸ್ವತ್ತನ್ನು ಅಪ್ರಾಮಾಣಿಕವಾಗಿ ದುರುಪಯೋಗಪಡಿಸುವ ಅಥವಾ ತನ್ನ ಸ್ವಂತ ಉಪಯೋಗಕ್ಕಾಗಿ ಬಳಸಿಕೊಳ್ಳುವ ಅಥವಾ ಅಂತಹ ನ್ಯಾಸವನ್ನು ಯಾವ

ರೀತಿಯಲ್ಲಿ ನಿರ್ವಹಿಸತಕ್ಕದೆಂಬ ವಿಧಾನವನ್ನು ಗೊತ್ತುಪಡಿಸುವ ಕಾನೂನಿನ ಯಾವುದೇ ನಿರ್ದೇಶನವನ್ನು ಅಥವಾ ಅಂತಹ ನ್ಯಾಸವನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿ ಆತನು ಮಾಡಿಕೊಂಡ ಯಾವುದೇ ವ್ಯಕ್ತ ಅಥವಾ ಸೂಚ್ಯವಾದ ಕೂನುನುಸಮ್ಮತ ಶರತ್ತನ್ನು ಉಲ್ಲಂಘಿಸಿ ಆ ಸ್ವತ್ತನ್ನು ಅಪ್ರಾಮಾಣಿಕವಾಗಿ ಉಪಯೋಗಿಸಿಕೊಳ್ಳುವ ಅಥವಾ ವಿಲೇವಾರಿ ಮಾಡುವ ಹಾಗೆ ಮಾಡಲು ಇತರ ಯಾವುದೇ ವ್ಯಕ್ತಿಗೆ ಬುದ್ಧಿಪೂರ್ವಕವಾಗಿ ಸಹಕರಿಸುವ ವ್ಯಕ್ತಿಯು ಅಪರಾಧಿಕ ನಂಬಿಕೆ ದ್ರೋಹ ಮಾಡಿದವನಾಗುತ್ತಾನೆ.

**420: ವಂಚನೆ ಮಾಡುವುದು ಮತ್ತು ಸ್ವತ್ತನ್ನು ನೀಡಲು ಅಪ್ರಾಮಾಣಿಕವಾಗಿ ಪ್ರೇರೇಪಿಸುವುದುಃ** ಯಾವ ವ್ಯಕ್ತಿಯೇ ಆಗಲಿ, ವಂಚಿಸಿದರೆ ಮತ್ತು ಹಾಗೆ ವಂಚಿತನಾದ ವ್ಯಕ್ತಿಯನ್ನು ಯಾವನೇ ವ್ಯಕ್ತಿಗೆ ಯಾವುದೇ ಸ್ವತ್ತನ್ನು ನೀಡುವಂತೆ ಅಪ್ರಾಮಾಣಿಕವಾಗಿ ಪ್ರೇರೆಪಿಸಿದರೆ ಅಥವಾ ಒಂದು ಮಾಲ್ಯವುಳ್ಳ ಭದ್ರತೆಯನ್ನು ಮತ್ತು ಭದ್ರತೆಯನ್ನು ಪರಿವರ್ತಿಸಬಹುದಾದ, ರುಜು ಮಾಡಿದ ಅಥವಾ ಮೊಹರು ಹಾಕಿದ ಯಾವುದೇ ಸ್ವತ್ತನ್ನು ಸಂಪೂರ್ಣವಾಗಿ ಅಥವಾ ಭಾಗಶಃ ರಚಿಸುವಂತೆ, ಬದಲಾಯಿಸುವಂತೆ ಅಥವಾ ನಾಶಪಡಿಸುವಂತೆ ಅಪ್ರಾಮಾಣಿಕವಾಗಿ ಪ್ರೇರೆಪಿಸಿದ ಪಕ್ಷದಲ್ಲಿ, ಆತನು ಏಳು ವರ್ಷಗಳ ಕಾಲಾವಧಿಯರೆಗೆ

ವಿಸ್ತರಿಸಬಹುದಾದ ಎರಡರಲ್ಲೊಂದು ಬಗೆಯ ಕಾರಾಗೃಹವಾಸದ ಶಿಕ್ಷೆಯಿಂದ ಮತ್ತು ಜುಲ್ಮಾನೆಯ ದಂಡದ ಶಿಕ್ಷೆಯಿಂದಲೂ ದಂಡಿತನಾಗತಕ್ಕದ್ದು.

**468: ವಂಚೆಯ ಉದ್ದೇಶಕ್ಕಾಗಿ ಖೊಟಾ ತಯಾರಿಕೆಃ** ಯಾವ ವ್ಯಕ್ತಿಯೇ ಆಗಲಿ, ವಂಚನೆಯ ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆಗಳನ್ನು ಖೋಟಾ ತಯಾರಿಕೆ ಮಾಡಿ ಉಪಯೋಗ ಮಾಡಿದ ಪಕ್ಷದಲ್ಲಿ, ಆತನು ಏಳು ವರ್ಷಗಳ ಕಾಲವಧಿಯವರೆಗೆ ವಿಸ್ತರಿಸಬಹುದಾದ ಎರಡರಲ್ಲೊಂದು ಬಗೆಯ ಕಾರಾಗೃಹವಾಸದ ಶಿಕ್ಷೆಯಿಂದ ಮತ್ತು ಜುಲ್ಮಾನೆಯ ದಂಡದ ಶಿಕ್ಷೆಯಿಂದಲೂ ದಂಡಿತನಾಗತಕ್ಕದ್ದು.

**16.** ಸದರಿ ಈ ಮೇಲನ ಕಲಂಗಳಲ್ಲಿ ಲಕ್ಷಣಗಳನ್ನು ನೋಡಿದಾಗ ಯಾವನೇ ಒಬ್ಬ ವ್ಯಕ್ತೀ ಆ ಪ್ರಮಾಣಿಕವಾಗಿ ಸ್ವತ್ತನ್ನು ಸ್ವಂತಕ್ಕಾಗಿ ಉಪಯೋಗಿಸಿಕೊಂಡಾಗ ಅದು ಅಪಾರಾಧಿಕೆ ನಂಬಿಕೆ ದ್ರೋಹ ಆಗುತ್ತದೆ. ಆದರೆ ಈ ಪ್ರಕರಣದಲ್ಲಿ ಆರೋಪಿತನು ಯಾವುದೇ ಸ್ವತ್ತಿನ ನ್ಯಾಸವಾಗಿ ಹಿಡಿದಿರುವುದಿಲ್ಲ. ಆದ್ದರಿಂದ ಕಲಂ 406 ಅಪಾರಾಧಿಗೆ ಅನ್ವಯವಾಗುವುದಿಲ್ಲ. ಕಲಂ 420 ಮತ್ತು 468 ರಂತೆ ಒಬ್ಬ ವ್ಯಕ್ತಿಯು ಮೋಸ ಮಾಡುವ ಉದ್ದೇಶದಿಂದ ದಾಖಲಾತಿಗಳನ್ನು ಸೃಷ್ಟಿ ಮಾಡಿದರೆ ಈ ಕಲಂನಲ್ಲಿ ಅಪರಾಧವಾಗುತ್ತದೆ.

17. ಸದರಿ ತನಿಖಾಧಿಕಾರಿ ಆರೋಪಿತನು ನೀಡಿರುವ ಬ್ಯಾಂಕ್ ಆರ್.ಟಿ.ಜಿ.ಎಸ್ ಡೆಪೋಸಿಟ್ ಮೇಮೊ ಮತ್ತು ದಿನಾಂಕ 09-09-2021 ರ ಚಕ್ ಇವು ಆರೋಪಿತನು ಸೃಷ್ಟಿ ಮಾಡಿರುತ್ತಾರೆ ಎಂದು ವರದಿ ಸಲ್ಲಿಸಿರುತ್ತಾರೆ. ಏಕೆಂದರ ಚಾಸಾಃ1 ರವರ ಬ್ಯಾಂಕ್ ಸ್ಟೆಟಮೆಂಟೆ ಪೂರಕವಾಗ ಇರುವುದಿಲ್ಲ. ಸದರಿ ಆರೋಪಿತನ ಪಾತ್ರ ಏನಿದೆ ಎಂಬುದು ಅಧಿವಿಚಾರಣೆ ಹಂತದಲ್ಲಿ ಸಾಕ್ಷ್ಯಗಳ ಮೂಲಕ ಕಂಡುಕೊಳ್ಳಬಹುದಾಗಿದೆ. ಆದರೆ ಆರೋಪಿ ಈ ಹಂತದಲ್ಲಿ ಯಾವುದೇ ಸಕ್ಷಮ ಕಾರಣಗಳನ್ನು ಈ ನ್ಯಾಯಾಲಯದ ಮುಂದೆ ತೋರಿಸಲು ವಿಫಲರಾಗಿರುತ್ತಾರೆ.

18. ಸದರಿ ಲಭ್ಯವಿರುವ ದಾಖಲಾತಿಗಳು ಮತ್ತು ಮತ್ತು ಆರೋಪಿತರು ಮಾಡಿರುವ ಕೃತ್ಯದ ಸ್ವರೂಪಗಳನ್ನು ಕಲಂ 239 ಅರ್ಜಿಯನ್ನು ನಿರ್ಣಯಿಸುವಾಗ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಮೇಲ್ನೋಟ್ಟಕೆ ಆರೋಪಿತರು ಅಪರಾಧ ಮಾಡಿರುತ್ತಾರೆಂದು ತನಿಖಾಧಿಕಾರಿ ಸೂಕ್ತವಾದ ಸಾಕ್ಷ್ಯಗಳನ್ನು ಸಂಗ್ರಹ ಮಾಡಿರುತ್ತಾರೆ. ಇಂತಹ ಸಂರ್ಭದಲ್ಲಿ ಆರೋಪಿತರ ವಿರುದ್ದ ಮಾಡಲಾಗಿರುವ ಅಪರಾಧಗಳು ಸುಳ್ಳು ಮತ್ತು ಆಧಾರ ರಹಿತ ಇರುತ್ತದೆ ಎಂದು ಹೇಳಲು ಬರುವುದಿಲ್ಲ. ಈ ಸದರಿ ಪ್ರಕರಣದಲ್ಲಿ ಅಭಿಯೋಜನೆಯದವರು ಹಾಜರುಪಡಿಸಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ, ಆರೋಪಿತರ ವಿರುದ್ದ ಮಾಡಿಲಾಗಿರುವ ಆರೋಪಗಳನ್ನು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದ್ದರಿಂದ ಸದರಿ ಆರೋಪಿತರ ಪಾತ್ರ ಈ ಪ್ರಕರಣದಲ್ಲಿ ಕಂಡುಕೊಳ್ಳಲು ಅಧಿವಿಚಾರಣೆ ಅವಶ್ಯಕತೆ ಇರುತ್ತದೆ. ಆದ್ದರಿಂದ ಆರೋಪಿತರನ್ನು ವಿಮೋಚನೆ ಮಾಡಲು ಯಾವುದೇ

ಸಕಾರಣ ಇರುವುದಿಲ್ಲ ಎಂದು **ಈ ನ್ಯಾಯಾಲಯ ಅಭಿಪ್ರಾಯ ಪಡುತ್ತಾ ಅಂಶ ಸಂಖ್ಯೆ1 ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತದೆ.**

19. **ಅಂಶ ಸಂಖ್ಯೆ 2** ಃ ಮೇಲ್ಕಂಡ ಕಾರಣಗಳಿಗೆ ಈ ಮುಂದಿನಂತೆ ಆದೇಶಿಸಲಾಗಿದೆ.

## ಃ ಆದೇಶ ಃ

ಅರ್ಜಿದಾರರು/ಆರೋಪಿತನು ದಂಡ ಪ್ರಕ್ರಿಯಾ ಸಂಹಿತೆ ಕಲಂ 239 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.

ಆರೋಪಿಯನ್ನು ಭಾ. ದ. ಸಂ.ಕಲಂ 406 ಅಪರಾಧದಿಂದ ವಿಮೋಚನೆ ಮಾಡಲಾಗಿದೆ.

**(ರಾಹುಲ ಚಾಂಭಾರ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,**
**ಯಾದಗಿರಿ.**